Superintendent, K.P.L.

Q.—4. Sri S. KARIAPPA (Virupakshapura).—

Will the Government be pleased to state:—

(*a*) whether the office of the Superintendent, K.P.L., will be shifted to Channapatna;

(*b*) if the answer is in the affirmative, whether they are going to remove the Transformer Station as well?

A—Sri H. M. CHANNABASAPPA (Minister for Industries).—

(*a*) A proposal has been made to that effect.

(*b*) No.

ಶ್ರೀ ಎಸ್. ಕರಿಯಪ್ಪ.—(a) ಪ್ರಶ್ನೆಗೆ ಉತ್ತರವಾಗಿ ಆ ರೀತಿಯಾಗಿ ಒಂದು ಸಲಹೆಯನ್ನು ಮಾಡಲಾಗಿದೆ ಎಂದು ಹೇಳಿದ್ದೀರಲ್ಲಾ ಅದರ ಜೊತೆಗೆ ಸಿಬ್ಬಂದಿಯನ್ನು ಕೂಡ ವರ್ಗಾಯಿಸಬೇಕೆಂದು ಮಾಡಿದ್ದೀರಾ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಹೌದು, ಆಫೀಸು ಹೋದ ಮೇಲೆ ಸಿಬ್ಬಂದಿಯೂ ಹೋಗುತ್ತದೆ.

ಶ್ರೀ ಎಸ್. ಕರಿಯಪ್ಪ.—ಸಿಬ್ಬಂದಿ ಸುಮಾರು ಎಷ್ಟು ಮಂದಿ ಇದ್ದಾರೆ?

ಶ್ರೀ ಎಚ್. ಎಂ. ಚನ್ನಬಸಪ್ಪ—ಆ ವಿವರ ಇಲ್ಲಿ ಇಲ್ಲ.

ಶ್ರೀ ಎಸ್. ಕರಿಯಪ್ಪ.—ಅವರುಗಳಿಗೆಲ್ಲಾ ಅಲ್ಲಿ ವಾಸಕ್ಕೆ ಮನೆ ಮುಂತಾದ ವ್ಯವಸ್ಥೆಗಳನ್ನು ಮಾಡುವುದಕ್ಕೆ ಏನಾದರೂ ಒಂದು ಎಸ್ಟಿಮೇಟ್ ಹಾಕಿದ್ದೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಚನ್ನಪಟ್ಟಣಕ್ಕೆ ವರ್ಗಾವಣೆ ಮಾಡುವುದಾದರೆ ಅಲ್ಲಿ ತಕ್ಕ ವ್ಯವಸ್ಥೆ ಮಾಡಿಯೇ ಮಾಡುತ್ತೇವೆ.

ಶ್ರೀ ಎಸ್. ಕರಿಯಪ್ಪ.—ಸುಮಾರು ಅದಕ್ಕೆ ಎಷ್ಟು ಹಣ ಬೇಕಾಗಬಹುದು ಎಂದು ಅಂದಾಜು ಹಾಕಿದ್ದೀರಿ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ವಿವರ ನನ್ನಲ್ಲಿ ಈಗ ಇಲ್ಲ.

ಶ್ರೀ ಎಸ್. ಕರಿಯಪ್ಪ.—ಯಾವ ಪ್ರಬಲವಾದ ಕಾರಣಕ್ಕಾಗಿ ಇದನ್ನು ವರ್ಗ ಮಾಡುವುದು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಚನ್ನಪಟ್ಟಣ ಕನಕಪುರಕ್ಕಿಂತ ಮಧ್ಯದಲ್ಲಿದೆ ಎಂದು ಈಗ ಆ ಪ್ರಪೋಸಲ್ ಬಂದಿದೆ.

ಶ್ರೀ ಎಸ್. ಕರಿಯಪ್ಪ.—ಎಷ್ಟೋ ವರ್ಷಗಳಿಂದ ಈ ಪವರ್ ಮತ್ತು ಲೈಟಿಂಗ್ ಸೂಪರ್‌ಇಂಡೆಂಟರ ಆಫೀಸು ಮತ್ತು ಟ್ರಾನ್ಸ್‌ಫಾರ್ಮರ್ ಸ್ಟೇಷನ್ನು ಇಲ್ಲೇ ಇದೆ ಅಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಬಂದಿರುವ ಪ್ರಪೋಸಲ್ ಸೂಪರ್‌ಇಂಡೆಂಟ್‌ರವರ ಆಫೀಸನ್ನು ಬದಲಾವಣೆ ಮಾಡಬೇಕೆಂದಿದೆಯೇ ವಿನಾ ಟ್ರಾನ್ಸ್‌ಫಾರ್ಮರ್ ಸ್ಟೇಷ ಬದಲಾವಣೆ ಮಾಡುವುದಿಲ್ಲ.

ಶ್ರೀ ಎಸ್. ಕರಿಯಪ್ಪ.—ಈ ಸೂಪರ್‌ಇಂಡೆಂಟ್ ಅವರು ಮತ್ತು ಸಿಬ್ಬಂದಿಯವರನ್ನು ಇಲ್ಲಿಂದ ತೆಗೆದು ಅಲ್ಲಿಗೆ ವರ್ಗ ಮಾಡಬೇಕಾದರೆ ಸಾಧಾರಣವಾಗಿ 30 ವರ್ಷದಿಂದ ಇಲ್ಲದೆ ಇದ್ದ ತೊಂದರೆ ಈಗ ಬಂದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೌದು ಮೂವತ್ತು ವರ್ಷದ ಹಿಂದಿನ ಪರಿಸ್ಥಿತಿ ಇವೊತ್ತು ಇಲ್ಲ. ಇವೊತ್ತಿನ ಪರಿಸ್ಥಿತಿಗೆ ತಕ್ಕಂತೆ ಇವೊತ್ತು ಮಾಡಬೇಕು.

Sales-tax and Licence fee income in Mysore City.

Q.—55. Sri B. NARAYANASWAMY (Mysore City South).—

Will the Government be pleased to state:—

(*a*) the income derived from levy of Sales-tax and Licence fee in the Mysore City for the years 1953 and 1954 (particulars may kindly be furnished as to how much was derived from levy on multi-point and on single-point separately);

(*b*) whether there are cases where tax was assessed on multi-point on commodities which come under single-point levy;

(*c*) whether there are any complaints that contractors are being levied, computing on the multi-point basis on articles issued by them for contract work such as iron, steel cement, etc.?

A.—Sri H. M. CHANNABASAPPA (Minister for Industries).—

(*a*)

	Licence fee	*Sales Tax realised from* *Multi-point*	*Single point*
	Rs.	Rs.	Rs.
1953-54 ...	25,686	7,82,335	3,83,241
1954-55 ...	13,906	6,08,004	4,42,517

(*b*) No.

(*c*) No.

Sri B. NARAYANASWAMY.—May I know the reasons for the fall in the revenue for the year 54-55 in the Licence fee ?

*Sri H. M. CHANNABASAPPA.—The fall in the revenue is due to the fact that there was a High Court decision to the effect that some of the people who act as an agent need not obtain licence under Section 9 of the Sales Tax Act. The persons who had to obtain licence under section 9 of the Sales Tax Act did not obtain licence because of the High Court decision, and therefore, there was fall in the revenue of licence fee.

Sri B. NARAYANASWAMY.—May I know what that High Court decision is and to what effect ?

Sri H. M. CHANNABASAPPA.—The High Court has opined that when a person who acts as a Commission Agent, when he transacts business on behalf of the people, if his accounts disclose that he has only acted as a commission agent even though he does the business, the Sales tax need not be collected from him. Therefore the Commission Agents took advantage of that decision and did not take licence in that year. Hence there was a fall in the revenue.

Electric Department (recommendations of the three-man Committee).

Q.—384. Sri S. GOPALA GOWDA (Sagar-Hosanagar).—

Will the Government be pleased to state :—

(*a*) the recommendations of the three-man committee constituted to consider the demands of the employees of the Electrical Department ;

(*b*) the steps that the Government have taken to implement them ;

(*c*) whether it has come to their notice that the Union has decided to serve fresh notice of demands ?

A.—Sri H. M. CHANNABASAPPA (Minister for Industries).—

(*a*) A copy of the report has already been placed on the Table of the House and supplied to Hon'ble Members.

(*b*) Final orders of Government have been passed accepting all the recommendations except that pertaining to revision of the scale of pay of certain class of employees.

(*c*) It has been brought to the notice of Government that the Executive Committee passed a resolution on 22nd January 1956 authorising the office bearers to serve a fresh notice of demand.

ಶ್ರೀ ಎಸ್. ಗೋಪಾಲಗೌಡ.—ಈ ಶಿಫಾರಸುಗಳನ್ನು ಅಂಗೀಕರಿಸಿ ಸರ್ಕಾರದವರು ಆಜ್ಞೆರು ಹುಕುಂನ್ನು ಸಾದರು ಮಾಡಿದ ತಾರೀಖು ಏನು ?

* Sri H. M. CHANNABASAPPA.—Very recently . . . .

ಶ್ರೀ ಎಸ್. ಗೋಪಾಲಗೌಡ.—ತಾರೀಖು ಗೊತ್ತಿಲ್ಲವೇ ?

Sri H. M. CHANNABASAPPA.—The date of the Government Order is not before me.

ಶ್ರೀ ಎಸ್. ಗೋಪಾಲಗೌಡ.—ಆಜ್ಞೆರು ಹುಕುಮ್ಮಿನಲ್ಲಿ ಒಂದು ಉಳಿದು ಎಲ್ಲಾ ಶಿಫಾರಸುಗಳನ್ನೂ ಅಂಗೀಕರಿಸಲಾಗಿದೆಯೆಂದು ಹೇಳಿದ್ದೀರಿ. ಆ ಶಿಫಾರಸುಗಳಲ್ಲಿ ಯಾವ ರೀತಿ ಅವರು ಕಾಣಿಸಿ ತಮ್ಮ ತೀರ್ಮಾನ ಕೊಟ್ಟಿದ್ದಾರೆಯೋ ಅದೇ ರೀತಿ ಪೂರ್ತಿಯಾಗಿ ಶಿಫಾರಸುಗಳನ್ನು ಒಪ್ಪಿಕೊಂಡಿದ್ದೀರಾ ಅಥವಾ ಆ ಶಿಫಾರಸುಗಳಲ್ಲಿ ಕೆಲವು ಅಂಶಗಳನ್ನು ಮಾತ್ರ ಜಾರಿಗೆ ಕೊಟ್ಟಿದ್ದೀರೇ ?

Sri H. M. CHANNABASAPPA.—As stated here, final orders of Government have been passed accepting all the recommendations except that pertaining to the revision of the Scale of Pay of certain class of employees. ಅವರು ಯಾವ ರೀತಿ ಶಿಫಾರಸು ಮಾಡಿದ್ದಾರೋ ಆ ರೀತಿ ಒಪ್ಪಿದ್ದೇವೆ.

ಶ್ರೀ ಎಸ್. ಗೋಪಾಲಗೌಡ.—ಆ ಹುಕ್ಕುಮಿನ ಒಂದು ಪ್ರತಿಯನ್ನು ಈ ಸಭೆಯ ಮುಂದೆ ಇಡಲು ಸಾಧ್ಯವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಗೆಜೆಟ್ಟಿನಲ್ಲಿ ಬಂದಿದೆ ; ತಾವು ನೋಡಬಹುದು.

ಶ್ರೀ ಎಸ್. ಗೋಪಾಲಗೌಡ.—ಹಂಗಾಮಿ ಕೆಲಸಗಾರರ ಬಗ್ಗೆ ಸರ್ಕಾರದವರ ನೀತಿಯೇನು ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ರಿಪೋರ್ಟಿನಲ್ಲಿ ಹಂಗಾಮಿ ಕೆಲಸಗಾರರ ಬಗ್ಗೆ ಏನು ಶಿಫಾರಸು ಮಾಡಿದ್ದಾರೋ ಅದನ್ನು ಅಂಗೀಕರಿಸಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಈಗ ಕಳೆದ ಮೂರು ತಿಂಗಳ ಹಿಂದೆ ಹಂಗಾಮಿ ಕೆಲಸಗಾರರನ್ನು, ಕೆಲವರನ್ನು, Roll ನಿಂದ ತೆಗೆದುಹಾಕಿ ಈಗ ಮತ್ತೆ ಹೊಸದಾಗಿ ಸೇರಿಸಿಕೊಳ್ಳುತ್ತಿದ್ದೀರಿ ಅಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೆಲಸವಿದ್ದಾಗ ಹೊಸದಾಗಿ ಸೇರಿಸಿಕೊಳ್ಳುತ್ತಾರೆ, ಇಲ್ಲದೆ ಇದ್ದಾಗ labour strengthನ್ನು ಕಡಮೆ ಮಾಡುತ್ತಾರೆ.